ನೆಮ್ಮದಿ ಮತ್ತು ಅವರ ಸಾಂಸ್ಕೃತಿಕ ಆತ್ಮಗೌರವಕ್ಕಾಗಿ ದುಡಿಯುತ್ತಿದ್ದಾರೆ. ನಾಲ್ಕು ದಶಕಗಳ ಕಾಲ ಆದಿವಾಸಿಗಳಾದ ಸೋಲಿಗರೊಂದಿಗಿನ ಒಡನಾಟ, ಸಂವಾದದ ಫಲವೇ 'ಸೋಲಿಗ ಚಿತ್ರಗಳು' ಎಂಬ ಕೃತಿ.

ಮೌಖಿಕ ಪರಂಪರೆಗಿಂತಲೂ ವ್ಯಕ್ತಿಯ ಬಗೆಗೆ, ಅವರ ಬದುಕನ್ನು ರೂಪಿಸುವ ಪರಿಸರದ ಬಗೆಗೆ ಜಯದೇವ ಅವರಿಗೆ ಆಸಕ್ತಿ ಹೆಚ್ಚು. ಸಾಹಿತ್ಯ ಕಲೆಗಳಿಗಿಂತಲೂ ಅವರ ಬದುಕು, ಅವರ ಸ್ವಭಾವ, ರೀತಿ ನೀತಿಗಳನ್ನು ಮೂಲದಿಂದಲೇ ಅರಿಯಬೇಕೆಂಬ ಆಕಾಂಕ್ಷೆ ಅವರದು. ಅವರೊಂದಿಗೆ ಕುಳಿತು ಬೆರೆತು ಅವರ ಸಂವೇದನೆಗಳನ್ನು ಇವರೂ ಅನುಭವಿಸಿ, ಅವರ ಬದುಕಿನ ಸ್ವರೂಪನ್ನು ಸಂಸ್ಕೃತಿಯ ವಿನ್ಯಾಸಗಳನ್ನು ಹಿಡಿದಿಡುವ ಪ್ರಯತ್ನವನ್ನು ಮಾಡುತ್ತಾರೆ. ಜಯದೇವ ಅವರಿಗೆ ಸೋಲಿಗರ ಬುದ್ಧಿ, ಆತ್ಮ ಇತ್ಯಾದಿಗಳಿಗಿಂತ ಅವರ ದೇಹ, ದೈಹಿಕ ಸಂವೇದನೆಯ ವಿವಿಧ ಮನೋಹರವಾದ ಪ್ರಕಾರಗಳ ಬಗ್ಗೆ ಆಸಕ್ತಿ. ಇದು ಮಾನವಶಾಸ್ತ್ರಜ್ಞನ ಆಸಕ್ತಿಯೆನಿಸಿದರೂ ಕೊನೆಗೆ ಅದು ಜೀವಶಾಸ್ತ್ರಜ್ಞನ ಆಸಕ್ತಿಯಾಗುತ್ತದೆ. ಅಂದರೆ, ಸೋಲಿಗ ಬುಡಕಟ್ಟಿನ ಪ್ರಾಚೀನರ ಶಕ್ತಿ, ದೈಹಿಕ ಚಲನವಲನಗಳು ಅವರ ಸ್ಮೃತಿಶಕ್ತಿ, ಪ್ರಕೃತಿ ಪರಿಸರ, ಜೈವಿಕ ಜಾಲದ ಬಗೆಗಿನ ಆಸಕ್ತಿ, ಕಾಳಜಿ ಇತ್ಯಾದಿಗಳ ಬಗ್ಗೆ ಕುತೂಹಲಗಳು, ಸೋಲಿಗರ ಪ್ರತ್ಯಕ್ಷ ಜೀವನವನ್ನು ತಲುಪಲು ಸಾಧ್ಯವಾಗುತ್ತದೆ. ಹೀಗಾಗಿ, ಜಯದೇವ ಅವರು ಸೋಲಿಗರ ಕಥೆ, ಕಾವ್ಯ, ಶಬ್ದಗಳಿಂದಾಚೆಗೆ ಹೋಗುತ್ತಾರೆ. ಅವರ ಸಾಂಸ್ಕೃತಿಕ ಸ್ವರೂಪ, ಅವರ ಬದುಕಿನ ವಿನ್ಯಾಸಗಳನ್ನು ಬದುಕಿನ ವಿಕಾಸದ ಸ್ವರೂಪವನ್ನು ಚರ್ಚಿಸುವುದರಲ್ಲಿ ಆಸಕ್ತಿ ಜಾಸ್ತಿ ಎಂಬುದು ತಿಳಿಯುತ್ತದೆ. ಆದ್ದರಿಂದಲೇ ಜಯದೇವ ಅವರು, "ನಾಲ್ಕು ದಶಕಗಳ ಕಾಲಮಾನದಲ್ಲಿ ಸೋಲಿಗರ ಜೀವನ–ಸಂಸ್ಕೃತಿ, ರೀತಿ ನೀತಿಗಳು ಬದಲಾದ ಬಗೆಯನ್ನು ತಟಸ್ಥವಾಗಿ ನೋಡಲು ಸಾಧ್ಯವೇ ಎಂದು ನನ್ನನ್ನು ನಾನೇ ಪ್ರಶ್ನಿಸಿಕೊಂಡಿದ್ದೇನೆ. ನಿಜ ಹೇಳಬೇಕೆಂದರೆ ಇಲ್ಲ ಎನ್ನುವುದೇ ಸರಿಯಾದ ಉತ್ತರ. ಸೋಲಿಗರ ಸಂಸ್ಕೃತಿಯಲ್ಲಿ ಆಗುತ್ತಿರುವ ಅನೇಕ ಬದಲಾವಣೆಗಳನ್ನು ಆತಂಕದಿಂದ, ವಿಷಾದದಿಂದ ಗಮನಿಸಿದ್ದೇನೆ. ಯಾವುದೇ ಸಂಸ್ಕೃತಿಯು ನಿಂತ ನೀರಲ್ಲ ಎಂದು ನನಗೆ ತಿಳಿದಿದೆ. ಹರಿಯಬೇಕಾದದ್ದು, ಬದಲಾಗಬೇಕಾದದ್ದು ಅದರ ಸಹಜ ಧರ್ಮ. ಆದರೆ, ನಾನು ಸಾಕ್ಷಿಯಾಗಿ ನಿಂತು ನೋಡುತ್ತಿರುವ ಈ ನಲವತ್ತು ವರ್ಷಗಳ ಬದಲಾವಣೆಯನ್ನು ಸಹಜ ಬದಲಾವಣೆ ಎನ್ನಲಾರೆ. ಕ್ಷಿಪ್ರಗತಿಯ ಈ ಬದಲಾವಣೆಗೆ ಕಾರಣೀಭೂತವಾದ ಮುಖ್ಯವಾಹಿನಿಯ ಸಮಾಜದ ಪ್ರತಿನಿಧಿ ನಾನೆಂಬ ಪ್ರಜ್ಞೆ ನನ್ನನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿಬಿಡುತ್ತದೆ. ಆದರೆ, ನಾನು ನನ್ನಂತಹ ಅನೇಕರು ನಿಸ್ಸಹಾಯಕರು ಎಂಬುದೂ ನಿಜ. ಜಾಗತೀಕರಣವು ಮುಖ್ಯವಾಹಿನಿ ಸಮಾಜವನ್ನು ಪ್ರಭಾವಿಸುತ್ತಿರುವಂತೆ ದೇಶದ ಎಲ್ಲಾ ಗಿರಿಜನರ ಜೀವನವನ್ನು ತನ್ನ ಮಾರುಕಟ್ಟೆ ಗುರಿಗಳಿಗೆ ತಕ್ಕಂತೆ ಬಲಿಪಶುಗಳನ್ನಾಗಿ ಮಾಡಿದೆ" ಎಂದು ಹೇಳುವ ಮಾತುಗಳಲ್ಲಿ ಆದಿವಾಸಿಗಳಾದ ಸೋಲಿಗರನ್ನು ಅವರು ಅಧ್ಯಯನ ಮಾಡಿರುವ ಕ್ರಮವನ್ನು ಅರಿಯಬಹುದು.

ಎಡ್ಗರ್ ಥರ್ಸ್ಟನ್ ಮತ್ತು ಕೆ. ರಂಗಾಚಾರಿ ಅವರ 'ದಕ್ಷಿಣ ಭಾರತದ ಜಾತಿ ಮತ್ತು ಬುಡಕಟ್ಟುಗಳು' ಪುಸ್ತಕದ ಸಂಪುಟ ಆರರಲ್ಲಿ 'ಶೋಲಗ' ಎಂಬ ಹೆಸರಿನ ಮೂಲಕ ಸೋಲಿಗರನ್ನು ಕುರಿತಾದ ವಿವರಗಳಿವೆ. 1807ರಲ್ಲಿ ಫ್ರಾನ್ಸಿಸ್ ಬುಕಾನಿನ್ ಎಂಬ ಸ್ಕಾಟ್‌ಲ್ಯಾಂಡಿನ ವೈದ್ಯ ಮದರಾಸು ಮತ್ತು ಮೈಸೂರು ಪ್ರಾಂತ್ಯಗಳಲ್ಲಿ ಅಧ್ಯಯನ ಮಾಡುವಾಗ ಸೋಲಿಗ ಆದಿವಾಸಿಗಳ ಕುರಿತು ಉಲ್ಲೇಖ ಮಾಡಿದ್ದಾರೆ ಎಂದು ಥರ್ಸ್ಟನ್ ಉಲ್ಲೇಖಿಸುತ್ತಾರೆ. ಅಲ್ಲಿಂದ ಇಲ್ಲಿಯವರೆಗೆ ಕೆಲವು ಮಾನವಶಾಸ್ತ್ರಜ್ಞರು, ಜಾನಪದ ತಜ್ಞರು ಈ ಸೋಲಿಗರ ಬಗ್ಗೆ ಹಲವಾರು ಲೇಖನಗಳನ್ನು ಬರೆದಿದ್ದಾರೆ. ಅವರ ಮೂಲಸಂಸ್ಕೃತಿ, ಆಚಾರ ವಿಚಾರಗಳ ಬಗ್ಗೆ ಮಾಹಿತಿಗಳನ್ನು ಸಂಗ್ರಹಿಸಿದ್ದಾರೆ.